# ಯೂರೋಪಿನ ಬೀದಿಕಲಾವಿದರು

**ಪ್ರದರ್ಶನಾಲಯಗಳ ಚೌಕಟ್ಟಿನಿಂದ ಹೊರಬರುವ ಕಲೆ ಬಯಲಿನ ಮುಕ್ತ ವೇದಿಕೆಯಲ್ಲಿ ವಿಶೇಷ ಸೊಬಗಿನಿಂದ ಕಂಗೊಳಿಸುತ್ತದೆ. ಆ 'ಬಯಲು ಕಲೆ'ಯ ಹಿನ್ನೆಲೆಯಲ್ಲಿ ಕಲಾವಿದನ ಬಡತನವೂ ಇರುತ್ತದೆ. ಯೂರೋಪಿನ ವಿವಿಧ ಭಾಗಗಳಲ್ಲಿನ ಬೀದಿ ಕಲೆ ಮತ್ತು ಕಲಾವಿದರನ್ನು ಚಿತ್ರಿಸುವ ಈ ಬರಹ, ಅಲೆಮಾರಿತನದಲ್ಲಿ ಕಲೆ ಮತ್ತು ಕಲಾವಿದ ದಕ್ಕಿಸಿಕೊಳ್ಳಬಹುದಾದ ವಿವಿಧ ಸಾಧ್ಯತೆಗಳ ಬಗ್ಗೆ ಸಹೃದಯರ ಗಮನಸೆಳೆಯುತ್ತದೆ. ನಮ್ಮೂರಿನ ಓಣಿಕೇರಿಗಳಲ್ಲಿ ಎದುರಾಗುವ ಕಲಾವಿದರನ್ನು ಬೇರೆಯದೇ ಕಣ್ಣಿನಿಂದ ನೋಡಲು ಈ ಲೇಖನ ಒತ್ತಾಯಿಸುವಂತಿದೆ.**

**■ ರಹಮತ್ ತರೀಕೆರೆ**



ಮೊದಲ ಸಲ ಯೂರೋಪಿಗೆ ಹೋದಾಗ, ಯಾವುದಾದರೂ ಥಿಯೇಟರಿಗೆ ಹೋಗಿ ಸಂಗೀತ ಕೇಳುವ ಅಥವಾ ನಾಟಕ ನೋಡುವ ಬಯಕೆಯಿತ್ತು. ಸಾಧ್ಯವಾಗಲಿಲ್ಲ. ಆದರೆ ಅಲ್ಲಿನ ಬೀದಿಕಲಾವಿದರು ಪಾಶ್ಚಾತ್ಯ ಸಂಗೀತವನ್ನು ನಮಗೆ ಬೇಕಾದಷ್ಟು ಉಣಬಡಿಸಿದರು. ಆ ಕಲಾವಿದರ ಮೊದಲ ಭೇಟಿ ಮ್ಯೂನಿಕ್ ನಗರದ ಟೌನ್‌ಹಾಲಿನಲ್ಲಾಯಿತು. ಅದೊಂದು ಪ್ರಾಚೀನವಾದ ಭವ್ಯಕಟ್ಟಡ. ವಿಶಾಲ ಅಂಗಳ. ಸುತ್ತಲೂ ತಿನಿಸು, ವೈನ್, ಹೂಗುಚ್ಛ ಮಾರುವ ದುಕಾನು. ಪ್ರವಾಸಿಗರೂ ಪ್ರೇಮಿಗಳೂ ಜೇನ್ನೊಣಗಳಂತೆ ಮುಕುರಿಕೊಳ್ಳುವ ತಾಣವದು. ತಿನ್ನುತ್ತ ಕುಡಿಯುತ್ತ ಫೋಟೊ ತೆಗೆಯುತ್ತ ಮೋಜಿನಲ್ಲಿ ಮುಳುಗಿರುವ ಜನ ಬೀದಿಗಾಯನವನ್ನೂ ಸವಿಯುತ್ತಿದ್ದರು. ಅಲ್ಲಿ ಹಲವಾರು ತಂಡಗಳಿದ್ದವು. ಅವುಗಳಲ್ಲಿ ಉಚ್ಚಸ್ವರದಲ್ಲಿ ಹಾಡುತ್ತಿದ್ದ ಒಬ್ಬ ಗಾಯಕಿಯ ತಂಡ ಬಹಳ ಜನರನ್ನು ಸೆಳೆದಿತ್ತು. ಆ ಗಾಯಕಿ ತನ್ನ ಏರುಸ್ವರದಲ್ಲೂ ಲಯಗೆಡದೆ ಮಾದಕವಾಗಿ ಹಾಡುತ್ತಿದ್ದಳು. ಗದ್ದಲದೊಳಗೂ ಶ್ರೋತೃಗಳನ್ನು ತಲುಪಲೆಂದು ಆಕೆ ಕಂಠತೀಕ್ಷ್ಣತೆ ರೂಢಿಸಿಕೊಂಡಂತಿತ್ತು. ನಮ್ಮಲ್ಲೂ, ಮೈಕಿರದ ಕಾಲದಲ್ಲಿ ನಾಟಕ, ಯಕ್ಷಗಾನ, ಬಯಲಾಟದ ಕಲಾವಿದರು ಏರುದನಿ ರೂಢಿಸಿಕೊಂಡಿದ್ದರು. ಪಾರಿಜಾತ ಕಲಾವಿದ ಅಪ್ಪಾಲಾಲರು, ತಂಪುಹೊತ್ತಲ್ಲಿ ಎರಡು ಮೈಲಿ ಕೇಳಿಸುವಂತೆ ಹಾಡುತ್ತಿದ್ದರಂತೆ. ಕೆಲವು ಯಕ್ಷಗಾನ ಭಾಗವತರ ಕಂಠವೂ ಕಂಚಿನ ಗಂಟೆಯಾಗಿತ್ತು. ಸಿನಿಮೋದ್ಯಮದ ಮೊದಲ ದಿನಗಳಲ್ಲಿ ರಂಗಭೂಮಿಯಿಂದ ಹೋದ ಈ ಕಲಾವಿದರು, ಪಿಸುಗುಟ್ಟನ್ನೂ ದಾಖಲಿಸುವ ಮೈಕಿಗೆ ಹೊಂದಿಕೊಳ್ಳಲು ಬಹಳ ಬವಣೆಪಟ್ಟರು. ಅದೊಂದು ಬೇರೆಯದೇ ಕತೆ.

ಬೀದಿಗಾಯಕರು ಜನರನ್ನು ರಂಜಿಸುವ ಕಾರಣ, ಯೂರೋಪಿನ ನಗರಾಡಳಿತಗಳು 'ಜನರಿಗೆ ಕಾಡಬಾರದು. ಟ್ರಾಫಿಕ್ಕಿಗೆ ಅಡಚಣೆ ತರಬಾರದು' ಎಂಬ ಕರಾರು ವಿಧಿಸಿ ಅನುಮತಿ ನೀಡಿವೆ. ವಾಹನ ಹಾಯದ ಹರಹುಳ್ಳ ಕಾಲುಹಾದಿಗಳೇ ಇವರ ವೇದಿಕೆಗಳು. ವಿಶೇಷವೆನಿಸಿದ್ದು, ಮ್ಯೂನಿಕ್ಕಿನಲ್ಲಿ ಒಬ್ಬ ಎಳೆಪ್ರಾಯದ ಚೆಲುವೆ, ಜನರು ಓಡಾಡುವ ಓಣಿಯಲ್ಲಿ ನಿಂತು ವಯಲಿನ್ ನುಡಿಸುತ್ತಿದ್ದುದು. ವೇಷಭೂಷಣ ಕಂಡರೆ ಆಕೆ ವಿದ್ಯಾರ್ಥಿನಿಯಾಗಿದ್ದು, ಕೈಖರ್ಚಿಗೆ ಬೇಕಾದ್ದನ್ನು ಘನತೆಯಿಂದ ಸಂಪಾದಿಸುತ್ತಿದ್ದಳು. ಅಲ್ಲಿನ ಬೀದಿಗಳಲ್ಲಿ ಚಿತ್ರರಚನೆಯ, ಕುಣಿತದ, ಕಣ್ಕಟ್ಟುಗಳ ಪ್ರದರ್ಶನಗಳುಂಟು. ಆದರೂ ಹಾಡಿಕೆಯೇ ಜನಪ್ರಿಯ. ಜರ್ಮನಿಗಿಂತ ಹೆಚ್ಚಾಗಿ ಇಟಲಿ, ನೆದರ್‌ಲ್ಯಾಂಡ್ಸ್, ಕ್ರೋಶಿಯಾ, ಸ್ಲೊವೇನಿಯಾಗಳಲ್ಲಿ ಹೆಚ್ಚು ಬೀದಿ ಕಲಾವಿದರು ಕಂಡರು. ಇಟಲಿಯಲ್ಲಿ ವಿವಿಧ ವಾದ್ಯಗಳನ್ನು ಜೋಡಿಸಿಕೊಂಡು ನುಡಿಸುವ ಹಾಡುವ ತಂಡಗಳಿವೆ. ಹೆಚ್ಚಿನ ಕಲಾವಿದರು ಗಿಟಾರ್, ಕೊಳಲು, ಅಕಾರ್ಡಿನ್, ಕ್ಲಾರಿಯೊನೆಟ್,